# ನಿಮ್ಮೊಡನೆ

## ನಿತ್ಯ ಪ್ರಹಸನಗಳ ರಾಜ್ಯಭಾರದಲ್ಲಿ ಅಪಹಾಸ್ಯಕ್ಕೆ ಒಡ್ಡಿಕೊಂಡ ಬದುಕು

ಏಪ್ರಿಲ್ 1 ಪ್ರಪಂಚದಾದ್ಯಂತ 'ಮೂರ್ಖರ ದಿನ'ವೆಂದೇ ಪ್ರಸಿದ್ಧಿಯಾಗಿದೆ. ಕುಚೇಷ್ಟೆಯ ಮೂಲಕ ಒಬ್ಬರು ಮತ್ತೊಬ್ಬರನ್ನು ಬೇಸ್ತು ಬೀಳಿಸುವ ದಿನವಾಗಿ ಅದು ಜನಜನಿತವಾಗಿದೆ. ಆದರೆ, ಇಂದಿನ ಈ ಕಾಲಘಟ್ಟದಲ್ಲಿ ಇಂತಹ ಕುಚೇಷ್ಟೆಗಳು ಯಾವುದೇ ಒಂದು ದಿನವಷ್ಟೇ ಆಗಬೇಕೆಂದೇನೂ ಇಲ್ಲ. ನಮ್ಮ ಬದುಕನ್ನು ನಾವೀಗ ಪ್ರತಿದಿನವೂ ಅಪಹಾಸ್ಯಕ್ಕೆ ಒಡ್ಡಿಕೊಂಡು ಬಿಟ್ಟಿದ್ದೇವೆ. ಬದುಕಿನ ನಂಬಿಕೆಗಳು, ಪರಸ್ಪರರ ಗೌರವಾದರಗಳಿಗೆ ಕಾರಣವಾಗಿದ್ದ ಮೌಲ್ಯಗಳು, ಮಾನವೀಯ ಸಂಬಂಧಗಳನ್ನು ಬೆಸೆದಿದ್ದ ಎಳೆಗಳು... ಎಲ್ಲವೂ ಅಪಹಾಸ್ಯಕ್ಕೆ ಒಳಗಾಗುತ್ತಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಸಿಕ್ಕ ಪೆಟ್ರೋಲ್, ಡೀಸೆಲ್ ಮೇಲೆ ಯದ್ವಾತದ್ವಾ ತೆರಿಗೆಯ ಹೊರೆಯನ್ನು ಹೊರಿಸಿ, ಮಾನವೀಯತೆಯನ್ನೇ ಮರೆತು ದುಡ್ಡು ಎಣಿಸುತ್ತಾ ಕುಳಿತಿವೆ ಸರ್ಕಾರಗಳು. ಹಣದುಬ್ಬರವನ್ನು ಹದ್ದುಬಸ್ತಿನಲ್ಲಿ ಇಡಬೇಕಾದವರೆಲ್ಲ ಬಡತನ ನಿವಾರಣೆಯ ಕುರಿತು ಬಡಾಯಿ ಕೊಚ್ಚುತ್ತಾ, ಬೆಲೆ ಏರಿಕೆ ನಿಯಂತ್ರಣದ ಹೊಣೆಯನ್ನೂ ಮರೆಯುತ್ತಾ ಕಾಲ ಕಳೆಯುವುದು ಜನರಿಗೆ ಮಾಡುವ ಗೇಲಿಯಲ್ಲದೆ ಬೇರೇನು? ಆರ್ಥಿಕ ಸಂಕಷ್ಟದಲ್ಲಿ ನಲುಗಿದವರ ಕುರಿತು, ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳ ಕುರಿತು, ನಿರುದ್ಯೋಗದ ಪೆಡಂಭೂತದ ಕುರಿತು ವಿಧಾನಸಭೆಯಲ್ಲಿ ಚರ್ಚೆ ನಡೆಯುತ್ತದೆ ಎಂದುಕೊಂಡರೆ ಅಲ್ಲಿ ನಡೆಯುವುದು ಸಿ.ಡಿ ಕುಚೇಷ್ಟೆಗಳ ಪಟ್ಟಾಂಗ. 'ಯಾರಿದ್ದಾರೆ ಏಕಪತ್ನಿ ವ್ರತಸ್ಥ ಶಾಸಕರು' ಎಂದು ಕೇಳುವ ಸಚಿವರು, ತಮ್ಮನ್ನು ಆರಿಸಿ ಕಳುಹಿಸಿದ ಮತದಾರರಿಗೆ ಅಪಹಾಸ್ಯ ಮಾಡುತ್ತಿದ್ದೇವೆ ಎಂಬುದನ್ನೇ ಮರೆತುಬಿಡುತ್ತಾರೆ!

ರೈತರ ಸಮಸ್ಯೆಗಳಾಗಲೀ ಅತ್ಯಾಚಾರದ ಘಟನೆಗಳಾಗಲೀ ಮಹಿಳೆಯರ ಅವಹೇಳನವಾಗಲೀ ಸಾರ್ವಜನಿಕ ಚರ್ಚೆಯ ವಿಷಯಗಳಾಗದೆ, ನಾವೇ ಆರಿಸಿ ಕಳುಹಿಸಿದ ಪ್ರತಿನಿಧಿಗಳ ಲಜ್ಜೆಗೇಡಿ ನಡವಳಿಕೆ, ಲಂಪಟತನದ ಕುರಿತು ಬಾಯಿ ಚಪ್ಪರಿಸುತ್ತಾ ಮಾತನಾಡಿಕೊಳ್ಳುವುದು ನಮಗೆ ನಾವೇ ಮಾಡಿಕೊಳ್ಳುವ ಗೇಲಿ. ಇನ್ನು ಚುನಾವಣಾ ಕಾಲಘಟ್ಟದಲ್ಲಿ ರಾಜಕೀಯ ನೇತಾರರ ಕುಚೇಷ್ಟೆಗಳಿಗೆ ಕೊನೆ ಎಂಬುದೇ ಇರಲಾರದು. ಐದು ವರ್ಷಗಳವರೆಗೆ ನಿತ್ಯವೂ ಬೇಸ್ತು ಬಿದ್ದರೂ ಪ್ರಚಾರ ಸಭೆಯಲ್ಲಿ ಹೇಳಿದ್ದನ್ನು ಮತ್ತೆ ನಂಬಿ, ಮೋಸಹೋಗುವ ಮತದಾರನಿಗೆ ಮೂರ್ಖನಾಗಲು ಏಪ್ರಿಲ್ ಒಂದೇ ಆಗಬೇಕೆಂದೇನಿಲ್ಲ.

ವರ್ತಮಾನದ ತವಕತಲ್ಲಣಗಳಿಗೆ ಕಣ್ಣು–ಕಿವಿ–ಬಾಯಿ ಮುಚ್ಚಿಕೊಂಡು ಕುಳಿತ ಕೆಲವು ಸ್ವಾಮೀಜಿಗಳು ಈಗ ಜಾತಿಪ್ರೇಮದ ಮೇಲಾಟದಲ್ಲಿ ನಿರತರು. ತಮ್ಮ ಜಾತಿಯವರಿಗೆ ಮೀಸಲಾತಿ ಸೌಲಭ್ಯ ನೀಡಬೇಕೆಂದು ಆಗ್ರಹಿಸಿ ಪಾದಯಾತ್ರೆಗಳೂ ನಡೆದಿವೆ. ಎಲ್ಲರನ್ನೂ ಒಳಗೊಳ್ಳುವ (inclusive) ವಚನ ಸಂಸ್ಕೃತಿ ಅರಳಿದ ನಾಡಿನಲ್ಲಿ ಈಗ ಎಲ್ಲರಿಂದಲೂ ಬೇರೆಯಾಗಿ ತಾವಷ್ಟೇ ಬೆಳೆಯುವ ಹಪಹಪಿ. ಧರ್ಮ–ಜಾತಿಗಳ ಬೇಲಿಯನ್ನು ದಾಟಿ ತಮ್ಮ ಮೇಲೆ, ತಮ್ಮ ಮಠಗಳ ಮೇಲೆ ಪ್ರೀತಿಯ ಮಳೆ ಸುರಿಸಿದವರಿಗೆ 'ನಾವು ಇಷ್ಟು ಕುಬ್ಜರು ನೋಡಿ' ಎಂಬಂತೆ ವರ್ತಿಸಿ ತೋರಿದ್ದು, ಅಪಹಾಸ್ಯವಲ್ಲದೆ ಮತ್ತೇನು?

ಸಮಾಜದಲ್ಲಿ ಮಾನವೀಯ ಅಂತಃಕರಣದ ಸೆಲೆಯೇ ಬತ್ತಿ ಹೋಗಿ, ಬಡವರ ಬದುಕನ್ನೇ ಗೇಲಿ ಮಾಡುತ್ತಿರುವುದಕ್ಕೆ ಕೊರಟಗೆರೆಯ ಹೂತಿಟ್ಟ ಹಸುಗೂಸಿನ ಶವವನ್ನು ಹೊರತೆಗೆಸಿದ ಅಮಾನವೀಯ ಘಟನೆಯೇ ಸಾಕ್ಷಿ. ಸಾವು ಯಾರದ್ದೇ ಆಗಿರಲಿ, ಘನತೆಯಿಂದ ಕೂಡಿರಬೇಕು ಎನ್ನುವುದನ್ನೂ ನಮ್ಮ ಸಮಾಜ ಮರೆತುಬಿಟ್ಟಿತಲ್ಲ? ಕಳೆದ ವರ್ಷ ಬಂದು ಅಪ್ಪಳಿಸಿದ ಕೋವಿಡ್ ಕಲಿಸಿದ ಪಾಠಗಳು ಹಲವು. ಆದರೆ, ಏನು ಮಾಡುವುದು? ನಮ್ಮ ಸ್ಮರಣಶಕ್ತಿ ಅಲ್ಪಾವಧಿಯದು.

ಚುನಾವಣೆ ಇರಲಿ, ಇಲ್ಲದಿರಲಿ, ರಾಜಕಾರಣಿಗಳ ಆಶ್ವಾಸನೆಗಳಿಗೇನೂ ಕೊರತೆ ಇಲ್ಲ. ತಮಿಳುನಾಡಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯೊಬ್ಬರು ಮತದಾರರಿಗೆ ನೂರು ದಿನಗಳ ಚಂದ್ರಲೋಕದ ಟ್ರಿಪ್‌ನ ಆಮಿಷ ಒಡ್ಡಿದ್ದಾರೆ. ನಮ್ಮ ರಾಜ್ಯದ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ ನೆರೆ ಹಾವಳಿಗೆ ತುತ್ತಾದವರಿಗೆ ಮನೆ ಕಟ್ಟಿಕೊಡುವ ಭರವಸೆ ನೀಡಿದ ಸಚಿವರು–ಶಾಸಕರು ಎಷ್ಟೋ. ಲಾಕ್‌ಡೌನ್‌ನಿಂದ ಕೆಲಸ ಕಳೆದುಕೊಂಡವರಿಗೆ ಉದ್ಯೋಗದ ಭರವಸೆಯನ್ನೂ ಕೊಟ್ಟವರೆಷ್ಟೋ. ಆದರೆ, ಎಲ್ಲಿವೆ ಮನೆಗಳು, ಯಾರಿಗೆ ಸಿಕ್ಕಿತು ಉದ್ಯೋಗ? ಮಾಧ್ಯಮಗಳಲ್ಲಿ ಪುಂಖಾನುಪುಂಖವಾಗಿ ಹರಿದುಬರುವ ಆಶ್ವಾಸನೆಗಳು ಜನಸಾಮಾನ್ಯರನ್ನು ಕಂಡು ಕಿಸಕ್ಕನೆ ನಕ್ಕಂತೆ ಭಾಸವಾಗುತ್ತದೆ.

ಚಾರ್ಲ್ಸ್ ದೊರೆಯು ಗ್ರಿಗೋರಿಯನ್ ಕ್ಯಾಲೆಂಡರ್‌ನಲ್ಲಿ ಹೊಸ ವರ್ಷದ ಆರಂಭವನ್ನು ಏಪ್ರಿಲ್ ಒಂದರಿಂದ ಜನವರಿ ಒಂದಕ್ಕೆ ಬದಲಾಯಿಸಿದ ಮೇಲೂ, ಅದನ್ನು ನಂಬದೇ, ಏಪ್ರಿಲ್ ಒಂದರಂದೇ ಹೊಸ ವರ್ಷ ಆಚರಿಸುತ್ತಿದ್ದವರನ್ನು ಮೂರ್ಖರೆಂದು ಕರೆಯಲಾಗುತ್ತಿತ್ತು. ಈಗ ಸಾಮಾಜಿಕ ಜಾಲತಾಣಗಳು, ಮಾಧ್ಯಮಗಳು, ಅವುಗಳ ಮೂಲಕ ರಾಜಕಾರಣಿಗಳು ಹೇಳುವುದನ್ನೆಲ್ಲ ನಂಬಿ ನಾವು ಮೂರ್ಖರಾಗುತ್ತಿದ್ದೇವೆ. ಆಗಿನವರು ವರ್ಷದಲ್ಲಿ ಒಂದುದಿನ ಮೂರ್ಖರಾದರೆ, ನಾವು ಈಗ ವರ್ಷಪೂರ್ತಿ ಮೂರ್ಖರಾಗುತ್ತಿದ್ದೇವೆ. ವ್ಯತ್ಯಾಸ ಇಷ್ಟೇ.

**■ ಪ್ರವೀಣ ಕುಲಕರ್ಣಿ**

ಗ್ರಿಗೋರಿಯನ್ ಕ್ಯಾಲೆಂಡರ್‌ನಲ್ಲಿ ಹೊಸ ವರ್ಷದ ಆರಂಭವನ್ನು ಏಪ್ರಿಲ್ ಒಂದರಿಂದ ಜನವರಿ ಒಂದಕ್ಕೆ ಬದಲಾಯಿಸಿದ ಮೇಲೂ, ಏಪ್ರಿಲ್ ಒಂದರಂದೇ ಹೊಸ ವರ್ಷ ಆಚರಿಸುತ್ತಿದ್ದವರನ್ನು ಮೂರ್ಖರೆಂದು ಕರೆಯಲಾಗುತ್ತಿತ್ತು. ಆಗಿನವರು ವರ್ಷದಲ್ಲಿ ಒಂದುದಿನ ಮೂರ್ಖರಾದರೆ, ನಾವೀಗ ವರ್ಷಪೂರ್ತಿ ಮೂರ್ಖರಾಗುತ್ತಿದ್ದೇವೆ. ಜನಸಾಮಾನ್ಯರನ್ನು ಮೂರ್ಖರನ್ನಾಗಿಸಲು ಇಡೀ ವ್ಯವಸ್ಥೆಯೇ ಟೊಂಕಕಟ್ಟಿ ನಿಂತಿದೆ.

